## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

| | |
|---|---|
| ಓ ಎಸ್ ನಂ | 122/2021 |
| ವಾದಿ | ಪಿ.ಡಬ್ಲ್ಯೂ-1 |
| ದಿನಾಂಕ | 31-01-2026 |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 3 ಮತ್ತು 7 ನೇ ಪ್ರತಿವಾದಿ ಪರ ಶ್ರೀ ವಿ ಜೆ ಜೆ ವಕೀಲರಿಂದಃ

1) ನಾನು ಮತ್ತು 2 ನೇ ವಾದಿ ಒಕ್ಕಲುತನ ಮಾಡುತ್ತೇವೆ. ನಾವು ಅನಕ್ಷರಸ್ಥರು. ನನ್ನ ತಂದೆ ಕಲ್ಲಪ್ಪ 2021 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಾಯಿ ತಂದೆಯ ತೀರಿಕೊಳ್ಳುವ ಪೂರ್ವದಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತಾಯಿಗೆ ನಾವು ಇಬ್ಬರು ಗಂಡು ಮಕ್ಕಳು. ನಾಲ್ಕು ಜನ ಹೆಣ್ಣು ಮಕ್ಕಳು. ಅವರೆಂದರೆ ಗಂಗುಬಾಯಿ, ಶೆವಂತಾಬಾಯಿ, ಗುಣಬಾಯಿ ಮತ್ತು ಚಂಪಾಬಾಯಿ.

2) ನಮ್ಮ ತಂದೆಗೆ ಮಹಾದೇವ ಮತ್ತು ಮಲ್ಲಪ್ಪ ಎನ್ನುವ ಸಹೋದರರು ಇದ್ದಾರೆ. ಮಲ್ಲಪ್ಪ ಎನ್ನುವವರು ತೀರಿಕೊಂಡಿರುತ್ತಾರೆ. ಮಹಾದೇವ ಇವರು ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿ ಆಗಿರುತ್ತಾರೆ. ಮಲ್ಲಪ್ಪ ಇವರು ಯಾವಾಗ ತೀರಿಕೊಂಡಿರುತ್ತಾರೆ ಎನ್ನುವುದು ಮಾಹಿತಿ ಇರುವುದಿಲ್ಲ. ಸದರಿಯವರು ಒಕ್ಕಲುತನ ಮಾಡುತ್ತಿದ್ದರು. 1 ನೇ ಪ್ರತಿವಾದಿಯು ಮದುವೆಯಾದ ನಂತರ 1972 ರಲ್ಲಿ ಊರು ಬಿಟ್ಟು ಸಾತಾರದಲ್ಲಿ ಹೋಗಿ ವಾಸ ಮಾಡಿರುತ್ತಾರೆ ಎಂದರೆ ಸರಿ. ಸಾತಾರದಲ್ಲಿ ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು.

3) ಸರ್ವೆ ನಂಬರ 147/5 ರಲ್ಲಿ ನನ್ನ ಅಜ್ಜನಿಗೆ 1 ಎಕರೆ 25 ಗುಂಟೆ ಜಮೀನು ಇತ್ತು ಅದು ನನ್ನ ತಂದೆ ಮತ್ತು ಅವರ ಸಹೋದರರಿಗೆ ಬಂದಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯು ಸದರಿ ಜಮೀನಿನಲ್ಲಿ ತನ್ನ ಹಿಸ್ಸೆದ ಜಮೀನನ್ನು ಮಾರಾಟ ಮಾಡಿರುತ್ತಾರೆ. ನಮ್ಮ ತಂದೆಗೆ ಬಂದಿರುವ ಪಾಲದಲ್ಲಿ ನಾವು ಮಾರಾಟ ಮಾಡಲು ವ್ಯವಹಾರ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಇನ್ನೂ ಖರೀದಿ

ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಚಿಕ್ಕಪ್ಪ ಮೃತ ಮಲ್ಲಪ್ಪ ರವರ ಮಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರ ಜಮೀನನ್ನು ನಾವು ಉಳುಮೆ ಮಾಡುತ್ತೇವೆ.

4) ನನದಿ ಗ್ರಾಮದ ಸರ್ವೆ ನಂಬರ 88/1 ರ 11 ಎಕರೆ 24 ಗುಂಟೆ ಜಮೀನು ಭಗವಂತ ಹಣಮಂತ ಕುಲಕರ್ಣಿ ಇವರ ಜಮೀನು ಎಂದರೆ ಸರಿ. ಆ ಜಮೀನಿನಲ್ಲಿ 1978 ರಲ್ಲಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಸೇರಿ 3 ಎಕರೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅದರಲ್ಲಿ 29 ಗುಂಟೆ ಪೂಟ ಖರಾಬ ಆಗಿರುತ್ತದೆ. ಸರ್ವೆ ನಂಬರ 88/1 ರಲ್ಲಿ ಇದ್ದ ಬಾವಿಯಲ್ಲಿ 1/6 ಹಿಸ್ಸೆ ನೀರನ್ನು ತೆಗೆದು ಕೊಂಡಿರುತ್ತಾರೆ. ಅದೇ ದಿನ ಅದೇ ಸರ್ವೆ ನಂಬರದಲ್ಲಿ ರಾಮಚಂದ್ರ ನಿಂಗಪ್ಪ ಮಡವಾಳೆ ಎನ್ನುವವರು 3 ಎಕರೆ 28 ಗುಂಟೆ ಜಮೀನು ಖರೀದಿಸಿದ್ದಾರೆ ಅದರಲ್ಲಿ 12 ಗುಂಟೆ ಪೂಟ ಖರಾಬ ಆಗಿರುತ್ತದೆ ಎಂದರೆ ಸರಿ.

5) ಸರ್ವೆ ನಂಬರ 88/1 ರಲ್ಲಿ ನಮ್ಮ ತಂದೆ ಮತ್ತು 1 ನೇ ಪ್ರತಿವಾದಿ ಖರೀದಿ ಮಾಡಿದ ಹಿಸ್ಸೆಯನ್ನು ಸರ್ವೆ ನಂಬರ 88/1ಅ ಆಗಿರುತ್ತದೆ, ರಾಮಚಂದ್ರ ಮಡಿವಾಳೆ ರವರ ಹಿಸ್ಸೆ ಸರ್ವೆ ನಂಬರ 88/1ಬ ಆಗಿರುತ್ತದೆ, ಉಳಿದ ಜಮೀನು ಹಿಸ್ಸೆ ಸರ್ವೆ ನಂಬರ 88/1ಕ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 1 ಖರೀದಿ ಪತ್ರದ ಪ್ರಕಾರ ನಮ್ಮ ತಂದೆ ಮತ್ತು 1 ನೇ ಪ್ರತಿವಾದಿಯ ಹೆಸರು ದಾಖಲ ಆಗಿರುತ್ತದೆ ಎಂದರೆ ಸರಿ. ನಂತರ ಆ ಜಮೀನಿನಲ್ಲಿ ಅವರಿಬ್ಬರು ಸೇರಿ ಒಂದು ಬಾವಿ ತೆಗೆದಿರುತ್ತಾರೆ ಎಂದರೆ ಸರಿ.

6) ನಿ ಪಿ 2 ರಂತೆ 1990 ರಲ್ಲಿ ಸರ್ವೆ ನಂಬರ 88/1ಬಿ ರಲ್ಲಿ ರಾಮಚಂದ್ರ ಮಡಿವಾಳೆ ಇವರ ಜಮೀನಿನಲ್ಲಿ ¾ ಹಿಸ್ಸೆ ಅಂದರೆ 2 ಎಕರೆ 31 ಗುಂಟೆ ಜಮೀನು ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅದರಲ್ಲಿ 9 ಗುಂಟೆ ಪೂರ ಖರಾಬ ಆಗಿರುತ್ತದೆ. ಈ ಮೊದಲು ಸರ್ವೆ ನಂಬರ 88/1 ರಲ್ಲಿ ಇರುವ ಬಾವಿಯಲ್ಲಿ ನಮಗೆ 1/6 ಹಿಸ್ಸೆ ನೀರು ತೆಗೆದು ಕೊಂಡಿದ್ದು ನಂತರ ಮತ್ತೆ ಹೆಚ್ಚುವರಿಯಾಗಿ ¼ ಹಿಸ್ಸೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿ ಪಿ 2 ರಂತೆ ಖರೀದಿ ಮಾಡಿದ ಜಮೀನಿನ ದಾಖಲೆಗಳಲ್ಲಿ ನಮ್ಮ ತಂದೆ ಮತ್ತು 1 ನೇ ಪ್ರತಿವಾದಿ ಹೆಸರು ದಾಖಲ ಆಗಿರುತ್ತದೆ ಎಂದರೆ ಸರಿ.

7) ಸರ್ವೆ ನಂಬರ 88/1ಬಿ ರಲ್ಲಿ ರಾಮಚಂದ್ರ ಮಡಿವಾಳೆ ಇವರ ಜಮೀನಿನಲ್ಲಿ ಉಳಿದ ¼ ಹಿಸ್ಸೆ ಅಂದರೆ 37 ಗುಂಟೆ ಜಮೀನು ದತ್ತಾತ್ರೇಯ ರಾವಳೂ ಕೇದಾರಿ

ಎನ್ನುವವರು  ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 88/1ಕ ದಲ್ಲಿ ಇರುವ ಜಮೀನು 4 ಎಕರೆ 36 ಗುಂಟೆ ಮೂಲ ಮಾಲಿಕರಾದ ಕುಲಕರ್ಣಿ ರವರಿಂದ ದತ್ತಾತ್ರೇಯ ರಾವಳೂ  ಕೇದಾರಿ ಇವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ.

8) ಸರ್ವೆ ನಂಬರ 88/1ಎ ಮತ್ತು 1ಬಿ ದಲ್ಲಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ಖರೀದಿಸಿರುವ ಜಮೀನುಗಳಲ್ಲಿ ಮಾರ್ಚ 2001 ರಲ್ಲಿ ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಆ ಸಮಯದಲ್ಲಿ ಸರ್ವೆ ನಂಬರ 147/5ಬಿ ದಲ್ಲಿ ನಮ್ಮ ಅಜ್ಜನಿಂದ ಬಂದಿರುವ ಆಸ್ತಿಯು ಸಹ ನನ್ನ ತಂದೆ ಮತ್ತು ಇಬ್ಬರು ಸಹೋದರರು ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 88/1ಎ ಇದು 3 ಎಕರೆ ಜಮೀನು 1 ನೇ ಪ್ರತಿವಾದಿ ಪಾಲಿಗೆ ಹೋಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ 88/1ಬಿ  ಇದು 3 ಎಕರೆ 28 ಗುಂಟೆ ಜಮೀನು  ಇದ್ದು ಅದರಲ್ಲಿ ¾ ಹಿಸ್ಸೆ ಎಂದರೆ 2 ಎಕರೆ 31 ಗುಂಟೆ ನಮ್ಮ ತಂದೆಯ ಪಾಲಿಗೆ  ಬಂದಿರುತ್ತದೆ  ಎಂದರೆ ಸರಿ.

9) ಸರ್ವೆ ನಂಬರ 147/5ಬಿ ದಲ್ಲಿ ನಮ್ಮ ಅಜ್ಜ ನನ್ನ ತಂದೆ ಮತ್ತು ಅವರ ಇಬ್ಬರು ಸಹೋದರರಿಗೆ ಪ್ರತ್ಯೇಕವಾಗಿ 21 ಗುಂಟೆ ಜಮೀನು ಕೊಟ್ಟಿರುತ್ತಾರೆ. ಆ ಮೂರು ಪಾಲುಗಳಲ್ಲಿ ನಮ್ಮ ತಂದೆಗೆ ಮಧ್ಯದ ಪಟ್ಟಿ ಕೊಟ್ಟಿರುತ್ತಾರೆ,  ಪೂರ್ವ ದಿಕ್ಕಿಗೆ ಮೃತ ಮಲ್ಲಪ್ಪ ರವರಿಗೆ ಕೊಟ್ಟಿರುತ್ತದೆ, ಪಶ್ಚಿಮ ದಿಕ್ಕಿಗೆ 1 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 88/1ಎ ದಲ್ಲಿ ತೆಗೆದಿರುವ ಬಾವಿಯಲ್ಲಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿಗೆ ½ ಹಿಸ್ಸೆ ನೀರಿನ ಪಾಲು ಬಂದಿರುತ್ತದೆ ಎಂದರೆ ಸರಿ. ಅದೇ ಜಮೀನಿನಲ್ಲಿ ಕಟ್ಟಿರುವ ಪಾರ್ಮ ಹೌಸ ದಲ್ಲಿ ಪೂರ್ವವ ಭಾಗ ಅರ್ಧ ನಮ್ಮ ತಂದೆಗೆ ಹಾಗೂ ಪಶ್ಚಿಮದ ಭಾಗ ಅರ್ಧ 1 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿ.

10) ನನ್ನ ತಂದೆ ಮತ್ತು ಇಬ್ಬರು ಸಹೋದರರು ವಾಟ್ನಿಯ ಪ್ರಕಾರ ತಮ್ಮ ತಮ್ಮ ಪಾಲುಗಳು ತೆಗೆದುಕೊಂಡ ನಂತರ ದಾಖಲೆಗಳಲ್ಲಿ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ಅದರ ಪ್ರಕಾರ ಡೈರಿ ನಂಬರ 5129 ಎಂದು ದಾಖಲೆ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ 88/1ಎ ದಲ್ಲಿ ನನ್ನ ತಂದೆಯ ಮತ್ತು 1 ನೇ ಪ್ರತಿವಾದಿಯ ಹೆಸರು ಇದ್ದು ಅದರಲ್ಲಿ ನನ್ನ ತಂದೆಯ ಹೆಸರು ತೆಗೆದು 1 ನೇ ಪ್ರತಿವಾದಿ ಹೆಸರು ಮಾತ್ರ ಸೇರಿಸಲಾಗಿತ್ತು ಮತ್ತು  ಅದೇ ರೀತಿ ಸರ್ವೆ ನಂಬರ 88/1ಬಿ ದಲ್ಲಿ ನನ್ನ ತಂದೆಯ ಮತ್ತು 1 ನೇ ಪ್ರತಿವಾದಿಯ ಹೆಸರು ಇದ್ದು ಅದರಲ್ಲಿ 1 ನೇ ಪ್ರತಿವಾದಿಯ  ಹೆಸರು ತೆಗೆದು ನನ್ನ ತಂದೆಯ ಹೆಸರು  ಮಾತ್ರ ಸೇರಿಸಲಾಗಿತ್ತು ಎಂದರೆ ಸರಿ.

11) ವಾಟ್ನಿ ಪ್ರಕಾರ ಬಂದಿರುವ ಪಾಲದಲ್ಲಿ ನನ್ನ ತಂದೆ ಮತ್ತು ಅವರ ಸಹೋದರರು ತಮ್ಮ ಕಬಜೆ ವಹಿವಾಟಿನಲ್ಲಿ ಬಂದಿರುತ್ತಾರೆ ಎಂದರೆ ಸರಿ. ನಮ್ಮ ತಂದೆಗೆ ಬಂದಿರುವ ಪಾಲಿನಲ್ಲಿ ನಾವು ಕಬಜೆ ವಹಿವಾಟಿನಲ್ಲಿ ಇದ್ದೇವೆ ಎಂದರೆ ಸರಿ. ನಾವು ಡೈರಿ ನಂಬರ 5129 ನಮೂದು ಆಗಿರುವ ಬಗ್ಗೆ ಯಾವುದೇ ನ್ಯಾಯಾಲಯಗಳಲ್ಲಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲವಕಾಶ ಕೋರಿದ್ದು, ಆಲಿಸಿ, ನ್ಯಾಯಿಕ ಹಿತದೃಷ್ಟಿಯಿಂದ ಕಾಲವಕಾಶ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ